ಸುರೇಶ್‌ಬಾಬು ಸಿ. ಬಿ.
ನಾಯಕರು
ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷ

ನಂ. 140–141, 1ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂ: 080–22253677 / 22033460

ದಿನಾಂಕ: 03.11.2026

ಘನತೆವೆತ್ತ ರಾಜ್ಯಪಾಲರು
ಕರ್ನಾಟಕ, ಲೋಕಭವನ,
ಬೆಂಗಳೂರು.

ಸನ್ಮಾನ್ಯರೇ,

ವಿಷಯ: ಸ್ಟಿಂಗ್ ಆಪರೇಷನ್ ಹೆಸರಿನಲ್ಲಿ ಸರ್ಕಾರದ ಅಸ್ತಿತ್ವದಲ್ಲೇ ಇಲ್ಲದ ಸುಳ್ಳು ಯೋಜನೆಯನ್ನು ಸೃಷ್ಟಿಸಿ ಆಡಳಿತ ಪಕ್ಷದ ಸಚಿವರು, ಶಾಸಕರು ಹಾಗೂ ವಿರೋಧ ಪಕ್ಷದ ಶಾಸಕರಿಗೆ ಹಣದ ಆಮಿಷವೊಡ್ಡಿ ಅಪರಾಧ ಮಾಡಲು ಪ್ರಚೋದಿಸಿ ಜನಪ್ರತಿನಿಧಿಗಳಿಗೆ ತೇಜೋವಧೆ ಮಾಡಿ ಗೌರವಕ್ಕೆ ಧಕ್ಕೆ ಬರುವಂತೆ ಬ್ಲಾಕ್ ಮೇಲ್ ಮಾಡುತ್ತಿರುವ ಖಾಸಗಿ ಮಾಧ್ಯಮದ ಪವರ್ ಟಿವಿ ಮುಖ್ಯಸ್ಥ ಹಾಗೂ ನೌಕರರುಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸ್ಟಿಂಗ್ ಆಪರೇಷನ್ ಎಂದರೆ (ರಹಸ್ಯ ಕಾರ್ಯಾಚರಣೆ) ಕಾನೂನುಬಾಹಿರ ಚಟುವಟಿಕೆಗಳು, ಭ್ರಷ್ಟಾಚಾರ ಅಥವಾ ಅಪರಾಧಗಳನ್ನು ಸಾಕ್ಷ್ಯ ಸಮೇತ ಬಯಲುಗೆಳೆಯಲು ಸಮಾಜಕ್ಕೆ ಮಾರಕವಾಗಿರುವ ಡ್ರಗ್ಸ್ ದಂದೆ, ವೇಶ್ಯಾವಾಟಿಕೆ, ಮಾನವ ಸಾಗಾಟ, ನಕಲಿ ನೋಟು ಚಲಾವಣೆ ಅಥವಾ ಅಕ್ರಮ ಶಸ್ತ್ರಾಸ್ತ್ರ ಮಾರಾಟಗಳನ್ನು ಪತ್ತೆಹಚ್ಚಲು ಸಾರ್ವಜನಿಕ ಹಿತಾಶಕ್ತಿ ಕಾಪಾಡುವುದು ಮತ್ತು ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಹೊರತೆಗೆಯಲು ನಡೆಸುವ ಒಂದು ರಹಸ್ಯ ಅಥವಾ ಮಾರುವೇಷದ ಕಾರ್ಯಾಚರಣೆಯಾಗಿದೆ. ಸಮಾಜದಲ್ಲಿ ಅಡಗಿರುವ ಭ್ರಷ್ಟಾಚಾರ ಅಪರಾಧಗಳು, ಕಪ್ಪು ಹಣದ ದಂದೆ ಅಥವಾ ಯಾವುದೇ ಕಾನೂನುಬಾಹಿರ ಚಟುವಟಿಕೆಗಳನ್ನು ರಹಸ್ಯವಾಗಿ ಕ್ಯಾಮರ ಅಥವಾ ದ್ವನಿಮುದ್ರಕಗಳ ಮೂಲಕ ಸಾಕ್ಷಿಸಮೇತ ಬಯಲಿಗೆಳೆಯುವ ಒಂದು ತಂತ್ರವಾಗಿರುತ್ತದೆ.

ದೇಶದ ಅಥವಾ ಸಮಾಜದ ಹಿತಾಶಕ್ತಿಗೆ ಧಕ್ಕೆಯಾಗುವಂತಹ ದೊಡ್ಡ ಹಗರಣಗಳು ನಡೆಯುತ್ತಿದ್ದಾಗ ಹಾಗೂ ಒಬ್ಬ ಅಧಿಕಾರಿ ಅಥವಾ ರಾಜಕಾರಣಿ ಲಂಚಕ್ಕೆ ಬೇಟಿಕೆಯಿಟ್ಟಿದ್ದು, ಆ ಬೇಡಿಕೆಯನ್ನು ಮತ್ತು ಲಂಚ ಪಡೆಯುವ ನೈಜಕೃತ್ಯವನ್ನು ಸಾಕ್ಷಿಸಮೇತ ಜಗತ್ತಿಗೆ ತೋರಿಸಲು –

569/6, ಮಹಾಲಕ್ಷ್ಮೀ ನಿಲಯ, ಪೇಟೆ ಬೀದಿ, ಚಿಕ್ಕನಾಯಕನಹಳ್ಳಿ – 572 214 ತುಮಕೂರು ಜಿಲ್ಲೆ.
ದೂ: 08133 267666, ಮೋ : +91 95139 55571 / 96119 35566 ಇ-ಮೇಲ್ : sureshbaabucb@gmail.com

Scanned with OKEN Scanner

ಸುರೇಶ್‌ಬಾಬು ಸಿ. ಬಿ.
ನಾಯಕರು
ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷ

ನಂ. 140–141, 1ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂ: 080–22253677 / 22033460

ಬಳಸಲಾಗುತ್ತದೆ. ಮಾದ್ಯಮಗಳು ಸ್ಟಿಂಗ್ ಆಪರೇಷನ್ ನಡೆಸಲು ಯಾವುದೇ ನೇರ ಅಥವಾ ಪ್ರತ್ಯೇಕವಾದ ಕಾನೂನು ಹಕ್ಕು ಇಲ್ಲದಿದ್ದರೂ ಕೂಡ ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ನ್ಯಾಯಾಲಯವು ಕಾಲಕಾಲಕ್ಕೆ ನೀಡಿರುವ ಮಾರ್ಗಸೂಚಿಗಳನ್ನು ಆಧರಿಸಿ ಸಂವಿಧಾನದ ವಿಧಿ 19(1)(ಎ) ಅಡಿಯಲ್ಲಿ ಇರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಾಗೂ ಪತ್ರಿಕಾ ಸ್ವಾತಂತ್ರ್ಯದ ಆಧಾರದ ಮೇಲೆ ಮಾದ್ಯಮ ಸಂಸ್ಥೆಗಳು ದೊಡ್ಡ ಹಗರಣಗಳು ಮತ್ತು ಭ್ರಷ್ಟಾಚಾರಗಳನ್ನು ಬಯಲಿಗೆಳೆಯಲು ಸ್ಟಿಂಗ್ ಅಪರೇಷನ್ ನಡೆಸುತ್ತಿರುವುದು ನಮಗೆಲ್ಲ ತಿಳಿದಿರುವ ಸಂಗತಿಯಾಗಿರುತ್ತದೆ.

ಸ್ಟಿಂಗ್ ಆಪರೇಷನ್ ಕೈಗೊಳ್ಳುವಾಗ ಭಾರತದ ಕಾನೂನು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಮತ್ತು ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ (PCI) ನಿಯಮಗಳು ಅನ್ವಯಿಸುತ್ತದೆ.

- **ಸಾರ್ವಜನಿಕ ಹಿತಾಸಕ್ತಿ ಕಡ್ಡಾಯ (Public Interest Test):** ಕಾರ್ಯಾಚರಣೆಯ ಏಕೈಕ ಉದ್ದೇಶ ಸಾರ್ವಜನಿಕ ಹಿತಾಸಕ್ತಿ, ದೇಶದ ಭದ್ರತೆ ಅಥವಾ ವ್ಯವಸ್ಥೆಯ ಸುಧಾರಣೆಯಾಗಿರಬೇಕು. ಯಾವುದೇ ಖಾಸಗಿ ವ್ಯಕ್ತಿಯ ವೈಯಕ್ತಿಕ ಲಾಭ ಅಥವಾ ಚಾನೆಲ್‌ನ ಟಿಆರ್‌ಪಿ (TRP) ಗಾಗಿ ಇದನ್ನು ಬಳಸುವಂತಿಲ್ಲ.

- **ಕೃತಕ ಅಪರಾಧ ಸೃಷ್ಟಿ ನಿಷೇಧ ನಿಯಮ (No Induction Rule)** ವಿಡಿಯೋ ಮಾಡುವವರು ಯಾವುದೇ ರೀತಿಯ ಸುಳ್ಳು ಕಥೆ, ನಕಲಿ ಯೋಜನೆ ಅಥವಾ ದೊಡ್ಡ ಹಣದ ಆಮಿಷವನ್ನು ಒಡ್ಡಿ ಎದುರಿಗಿರುವ ವ್ಯಕ್ತಿಯನ್ನು ಬಲವಂತವಾಗಿ ಒಪ್ಪಿಸುವಂತೆ ನಾಟಕ ಮಾಡಬಾರದು, ಎದುರಿಗಿರುವ ವ್ಯಕ್ತಿ ತಾನಾಗಿಯೇ ಲಂಚ ಕೇಳುತ್ತಿರುವಾಗ ಅಥವಾ ಅಕ್ರಮ ಎಸಗುತ್ತಿರುವಾಗ ಮಾತ್ರ ಅದನ್ನು ರಹಸ್ಯವಾಗಿ ವಿಡಿಯೋ ಮಾಡಬಹುದು. ತಾವೇ ಆಮಿಷ ಒಡ್ಡಿ ವಿಡಿಯೋ ಮಾಡಿದರೆ ಅದನ್ನು 'ಎಂಟ್ರ್ಯಾಪ್‌ಮೆಂಟ್' (Entrapment) ಎನ್ನಲಾಗುತ್ತದೆ, ಇದು ಕಾನೂನುಬಾಹಿರ ಚಟುವಟಿಕೆಯಾಗುತ್ತದೆ.

569/6, ಮಹಾಲಕ್ಷ್ಮೀ ನಿಲಯ, ಪೇಟೆ ಬೀದಿ, ಚಿಕ್ಕನಾಯಕನಹಳ್ಳಿ – 572 214 ತುಮಕೂರು ಜಿಲ್ಲೆ.
ದೂ: 08133 267666, ಮೋ : +91 95139 55571 / 96119 35566 ಇ-ಮೇಲ್ : sureshbaabucb@gmail.com

Scanned with OKEN Scanner

ಸುರೇಶ್‌ಬಾಬು ಸಿ. ಬಿ.
ನಾಯಕರು
ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷ

ನಂ. 140–141, 1ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂ: 080–22253677 / 22033460

- ದೃಢೀಕರಣ ಮತ್ತು ವಿಶ್ವಾಸಾರ್ಹತೆ ನಿಯಮ (**Verification Rule**) ವಿಡಿಯೋ ಮಾಡಿದ ತಕ್ಷಣ ಅದನ್ನು ನೇರವಾಗಿ ಪ್ರಸಾರ ಮಾಡುವಂತಿಲ್ಲ. ಆ ವಿಡಿಯೋದಲ್ಲಿರುವ ಸತ್ಯಾಸತ್ಯತೆಯನ್ನು ಮಾಧ್ಯಮ ಸಂಸ್ಥೆಯು ಆಂತರಿಕವಾಗಿ ಸಂಪೂರ್ಣವಾಗಿ ಪರಿಶೀಲಿಸಬೇಕು, ವಿಡಿಯೋದಲ್ಲಿರುವ ವ್ಯಕ್ತಿ ಯಾರು, ಆತ ಆಡಿರುವ ಮಾತುಗಳು ನಿಜವೇ ಎಂಬುದಕ್ಕೆ ಪೂರಕ ದಾಖಲೆಗಳನ್ನು (**Corroborative Evidence**) ಕಲೆ ಹಾಕಬೇಕು. ಕೇವಲ ಒಂದು ಅಸ್ಪಷ್ಟ ವಿಡಿಯೋ ಇಟ್ಟುಕೊಂಡು ಯಾರ ಮೇಲೂ ಆರೋಪ ಹೊರಿಸುವಂತಿಲ್ಲ.

- ಆರೋಪಿತ ವ್ಯಕ್ತಿಯ ಪ್ರತಿಕ್ರಿಯೆ ನಿಯಮ (**Right to Reply**) ವಿಡಿಯೋವನ್ನು ಸಾರ್ವಜನಿಕವಾಗಿ ಪ್ರಸಾರ ಮಾಡುವ ಮುನ್ನ ಆ ವಿಡಿಯೋದಲ್ಲಿರುವ ವ್ಯಕ್ತಿಗೆ (ಅಧಿಕಾರಿ ಅಥವಾ ಜನಪ್ರತಿನಿಧಿ) ಆ ದೃಶ್ಯಾವಳಿಗಳನ್ನು ತೋರಿಸಿ, ಅವರ ವಿವರಣೆ ಅಥವಾ ಪ್ರತಿಕ್ರಿಯೆಯನ್ನು (**Version**) ಕೇಳಬೇಕು. ಅವರ ಪ್ರತಿಕ್ರಿಯೆಯನ್ನೂ ಸಹ ವಿಡಿಯೋದ ಜೊತೆಯಲ್ಲೇ ಸಮಾನವಾಗಿ ಪ್ರಸಾರ ಮಾಡಬೇಕು ಎಂಬುದು ಮಾಧ್ಯಮ ನೀತಿ ಸಂಹಿತೆಯ ಪ್ರಮುಖ ನಿಯಮವಾಗಿದೆ.

- ಇದು "ಅಪರಾಧದ ಸೃಷ್ಟಿ" (**Creation of Crime**) ಸ್ಟಿಂಗ್ ಆಪರೇಷನ್‌ನ ಮೂಲ ಉದ್ದೇಶ ಸಮಾಜದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಭ್ರಷ್ಟಾಚಾರವನ್ನು ಸಾಕ್ಷ್ಯ ಸಮೇತ ಹಿಡಿಯುವುದೇ ಹೊರತು, ಅಸ್ತಿತ್ವದಲ್ಲೇ ಇಲ್ಲದ ಸುಳ್ಳು ಯೋಜನೆಯನ್ನು ಸೃಷ್ಟಿಸಿ ಯಾರನ್ನಾದರೂ ಬಲೆಗೆ ಬೀಳಿಸುವುದಲ್ಲ. ಅಸ್ತಿತ್ವದಲ್ಲೇ ಇಲ್ಲದ ಸುಳ್ಳು ಕಂಪನಿ ಅಥವಾ ಸುಳ್ಳು ಯೋಜನೆಗಳ ಹೆಸರಿನಲ್ಲಿ ಹಣದ ಆಮಿಷ ಒಡ್ಡುವುದನ್ನು ಕಾನೂನಿನಲ್ಲಿ 'ಎಂಟ್ರ್ಯಾಪ್‌ಮೆಂಟ್' (**Entrapment**) ಎನ್ನಲಾಗುತ್ತದೆ. ಇದು ನ್ಯಾಯಾಲಯದ ದೃಷ್ಟಿಯಲ್ಲಿ ಮಾನ್ಯವಲ್ಲ.

- ಖಾಸಗಿತನ ಮತ್ತು ವಂಚನೆಯ ಆರೋಪ (**Fraud**) ಸರ್ಕಾರದ ಹೆಸರನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಯೋಜನೆಗಳನ್ನು ಸೃಷ್ಟಿಸುವುದು ಸರ್ಕಾರದ ವಿರುದ್ಧವೇ ನಡೆಸುವ ವಂಚನೆಯೂ (**Forgery & Cheating**) ಆಗುತ್ತದೆ.

569/6, ಮಹಾಲಕ್ಷ್ಮೀ ನಿಲಯ, ಪೇಟೆ ಬೀದಿ, ಚಿಕ್ಕನಾಯಕನಹಳ್ಳಿ – 572 214 ತುಮಕೂರು ಜಿಲ್ಲೆ.
ದೂ: 08133 267666, ಮೋ : +91 95139 55571 / 96119 35566 ಇ–ಮೇಲ್ : sureshbaabucb@gmail.com

Scanned with OKEN Scanner

ಸುರೇಶ್‌ಬಾಬು ಸಿ. ಬಿ.
ನಾಯಕರು
ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷ

ನಂ. 140–141, 1ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂ: 080–22253677 / 22033460

ಜೊತೆಗೆ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲದೆ ಕೇವಲ ಶಾಸಕರನ್ನು ಸಿಲುಕಿಸಲು ಇಂತಹ ತಂತ್ರ ರೂಪಿಸಿದರೆ ಅದು ಸಂವಿಧಾನದ ವಿಧಿ 21 ರ ಅಡಿಯಲ್ಲಿ ವ್ಯಕ್ತಿಗೆ ಸಿಗುವ ಖಾಸಗಿತನದ ಹಕ್ಕಿನ ಉಲ್ಲಂಘನೆಯಾಗುತ್ತದೆ.

ಮುಂದುವರೆದು, ಅಧಿಕೃತವಾಗಿ ಲಂಚದ ಹಣ ನೀಡಿ ಭ್ರಷ್ಟ ಅಧಿಕಾರಿಯನ್ನು ಸ್ಥಳದಲ್ಲೇ ಸಾಕ್ಷಿ ಸಮೇತ ಬಂಧಿಸುವ 'ಟ್ರಾಪ್ ಆಪರೇಷನ್' ಮಾಡಲು ಕೇವಲ ಸಾಂವಿಧಾನಿಕ ತನಿಖಾ ಸಂಸ್ಥೆಗಳಾದ ಲೋಕಾಯುಕ್ತ, ಸಿಬಿಐ (CBI) ಅಥವಾ ಪೊಲೀಸರಿಗೆ ಮಾತ್ರ ಕಾನೂನಿನಲ್ಲಿ ಪೂರ್ಣ ಅಧಿಕಾರವಿರುತ್ತದೆ. ತನಿಖಾ ಸಂಸ್ಥೆಗಳು ಕೂಡ ತಾವಾಗಿಯೇ ಯಾರಿಗೂ ಲಂಚದ ಆಮಿಷ ಒಡ್ಡುವಂತಿಲ್ಲ. ಸಾರ್ವಜನಿಕರು ಬಂದು "ಅಧಿಕಾರಿ ಲಂಚ ಕೇಳುತ್ತಿದ್ದಾನೆ" ಎಂದು ಲಿಖಿತ ದೂರು ನೀಡಿದಾಗ ಮಾತ್ರ ಕಾನೂನು ಬದ್ಧವಾಗಿ ಟ್ರಾಪ್ ಮಾಡಲು ಅವಕಾಶವಿರುತ್ತದೆ.

ಖಾಸಗಿ ವ್ಯಕ್ತಿಗಳು ಅಥವಾ ಮಾಧ್ಯಮಗಳು ಸರ್ಕಾರಿ ಅಧಿಕಾರಿಗೆ ತಾವಾಗಿಯೇ ಹಣದ ಆಮಿಷವೊಡ್ಡುವುದು ಕಾನೂನಿನ ಪ್ರಕಾರ "ಲಂಚ ನೀಡಲು ಪ್ರೇರೇಪಿಸಿದ" (**Abetment of Bribery**) ಅಪರಾಧವಾಗಬಹುದು ಎಂದು ತಿಳಿಸುತ್ತದೆ.

ಆದರೆ, ಇಷ್ಟೆಲ್ಲಾ ಭಾರತದ ಕಾನೂನು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಮತ್ತು ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ (**PCI**) ನಿಯಮಗಳಿದ್ದರೂ ಕೂಡ ಕರ್ನಾಟಕದ ಖಾಸಗಿ ಮಾಧ್ಯಮದ ಪವರ್ ಟಿವಿ ಮುಖ್ಯಸ್ಥರಾದ ಶ್ರೀ ರಾಕೇಶ್ ಶೆಟ್ಟಿ ಯವರು ಬ್ಲಾಕ್ ಮೇಲ್ ಮತ್ತು ಸುಲಿಗೆ ಮಾಡಲು, ಇದನ್ನು ರಾಜಕೀಯವಾಗಿ ಬಳಸಿಕೊಳ್ಳಲು ಸರ್ಕಾರದ ಹೆಸರಿನಲ್ಲಿ ವಂಚನೆ ಮಾಡಿ ಮಾರ್ಚ್ 24, 2023 ರಲ್ಲಿ ಓಎಫ್‌ಸಿ ಕೇಬಲ್ ಅಳವಡಿಕೆ ಎಂಬ ರಾಜ್ಯ ಸರ್ಕಾರದ ಅಸ್ತಿತ್ವದಲ್ಲಿಲ್ಲದ ಸುಳ್ಳು ಯೋಜನೆ ಸೃಷ್ಟಿಸಿ "ಪವರ್ ಬೇಟೆ" ಎಂಬ ಶೀರ್ಷಿಕೆಯಡಿ ಸುಮಾರು 33 ಶಾಸಕರುಗಳ ಕಛೇರಿಗಳಿಗೆ ಹಾಗೂ ಮನೆಗಳಿಗೆ ಖುದ್ದಾಗಿ ಹೋಗಿ ಸದರಿ ಯೋಜನೆಯ ಅನುಷ್ಠಾನಕ್ಕೆ ಹಣದ ಆಮಿಷ ನೀಡಿ ಮತ್ತು ಶಾಸಕರಿಗೆ ಖುದ್ದಾಗಿ ಹಣ ನೀಡುವ ಮೂಲಕ ಹೊಸ ಅಪರಾಧವನ್ನು ಹುಟ್ಟುಹಾಕಿ ಆಡಳಿತ ಪಕ್ಷದ ಈ ಕೆಳಕಂಡ ಮಾನ್ಯ ಸಚಿವರು ಮತ್ತು ಶಾಸಕರುಗಳನ್ನು ತೇಜೋವಧೆ ಹಾಗೂ ಗೌರವಕ್ಕೆ ಧಕ್ಕೆ ಬರುವಂತೆ ಮಾಡಿರುವುದು ವಿಪರ್ಯಾಸದ ಸಂಗತಿಯಾಗಿರುತ್ತದೆ.

569/6, ಮಹಾಲಕ್ಷ್ಮೀ ನಿಲಯ, ಪೇಟೆ ಬೀದಿ, ಚಿಕ್ಕನಾಯಕನಹಳ್ಳಿ – 572 214 ತುಮಕೂರು ಜಿಲ್ಲೆ.
ದೂ: 08133 267666, ಮೋ : +91 95139 55571 / 96119 35566 ಇ–ಮೇಲ್ : sureshbaabucb@gmail.com

Scanned with OKEN Scanner

ಸುರೇಶ್‌ಬಾಬು ಸಿ. ಬಿ.
ನಾಯಕರು
ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷ

ನಂ. 140–141, 1ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂ: 080–22253677 / 22033460

ಕ್ರ.ಸಂ	ಅಡಳಿತ ಪಕ್ಷದ ಶಾಸಕರು/ ಸಚಿವರುಗಳ ಹೆಸರು	ವಿಧಾನಸಭಾ ಕ್ಷೇತ್ರ
1	ಶ್ರೀ ಪುಟ್ಟರಂಗಶೆಟ್ಟಿ ರವರು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು,	ಚಾಮರಾಜನಗರ
2	ಶ್ರೀ ಟಿ. ರಘುಮೂರ್ತಿ ರವರು ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು	ಚಳ್ಳಕೆರೆ
3	ಶ್ರೀ ಕೆ.ಎಂ. ಶಿವಲಿಂಗೇಗೌಡ ರವರು ಮಾನ್ಯ ಅಬಕಾರಿ ಸಚಿವರು	ಅರಸೀಕೆರೆ
4	ಶ್ರೀ ಶರಣಬಸಪ್ಪ ದರ್ಶನಾಪೂರ ರವರು ಮಾನ್ಯ ಮಾಜಿ ಸಚಿವರು/ ಶಾಸಕರು	ಶಹಪೂರ
5	ಶ್ರೀ ರಹೀಂ ಖಾನ್ ರವರು ಮಾನ್ಯ ಮಾಜಿ ಸಚಿವರು/ ಶಾಸಕರು	ಬೀದರ್
6	ಶ್ರೀ ಬಿ.ನಾಗೇಂದ್ರ ರವರು ಮಾನ್ಯ ಮಾಜಿ ಸಚಿವರು/ ಶಾಸಕರು	ಬಳ್ಳಾರಿ ಗ್ರಾಮಾಂತರ
7	ಶ್ರೀ ಬಸವನಗೌಡ ದದ್ದಲ್ ರವರು ಮಾನ್ಯ ಶಾಸಕರು	ರಾಯಚೂರು (ಗ್ರಾಮಾಂತರ)
8	ಶ್ರೀ ಕೆ.ವೈ. ನಂಜೇಗೌಡ ರವರು ಮಾನ್ಯ ಶಾಸಕರು	ಮಾಲೂರು
9	ಶ್ರೀ ಬಸವನಗೌಡ ತುರುವಿಹಾಳ್ ರವರು ಮಾನ್ಯ ಶಾಸಕರು	ಮಸ್ಕಿ
10	ಶ್ರೀ ಸಂಗಮೇಶ್ ರವರು ಮಾನ್ಯ ಶಾಸಕರು	ಭದ್ರಾವತಿ
11	ಶ್ರೀ ಜೆ.ಎನ್. ಗಣೇಶ್ ರವರು ಮಾನ್ಯ ಶಾಸಕರು	ಕಂಪ್ಲಿ
12	ಶ್ರೀ ರಾಘವೇಂದ್ರ ಹಿಟ್ನಾಲ್ ರವರು ಮಾನ್ಯ ಶಾಸಕರು	ಕೊಪ್ಪಳ

569/6, ಮಹಾಲಕ್ಷ್ಮೀ ನಿಲಯ, ಪೇಟೆ ಬೀದಿ, ಚಿಕ್ಕನಾಯಕನಹಳ್ಳಿ – 572 214 ತುಮಕೂರು ಜಿಲ್ಲೆ.
ದೂ: 08133 267666, ಮೋ : +91 95139 55571 / 96119 35566 ಇ–ಮೇಲ್ : sureshbaabucb@gmail.com

Scanned with OKEN Scanner

ಸುರೇಶ್‌ಬಾಬು ಸಿ. ಬಿ.
ನಾಯಕರು
ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷ

ನಂ. 140–141, 1ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂ: 080–22253677 / 22033460

ಮೇಲ್ಕಂಡ ಆಡಳಿತ ಪಕ್ಷದ ಶಾಸಕರುಗಳನ್ನು ಸ್ಟಿಂಗ್ ಆಪರೇಷನ್ ಹೆಸರಿನಲ್ಲಿ ತೇಜೋವಧೆ, ಗೌರವಕ್ಕೆ ಧಕ್ಕೆ ಬರುವಂತೆ ಮಾಡಿದಾಗಲೇ ಖಾಸಗಿ ಮಾದ್ಯಮದ ಮೇಲೆ ರಾಜ್ಯದ ಗೃಹ ಇಲಾಖೆ, ಪೊಲೀಸ್ ಅಧಿಕಾರಿಗಳು ಹಾಗೂ ಮಾನ್ಯ ಲೋಕಾಯುಕ್ತರವರು ಸದರಿ ಖಾಸಗಿ ಮಾದ್ಯಮದ ಮುಖ್ಯಸ್ಥರ ಮೇಲೆ ನಿರ್ದಿಷ್ಟವಾದ ಕ್ರಮ ಕೈಗೊಳ್ಳಬೇಕಾಗಿತ್ತು. ಆದರೆ ಸದರಿ ವ್ಯಕ್ತಿಯ ಮೇಲೆ ಗೃಹ ಇಲಾಖೆ, ಪೊಲೀಸ್ ಅಧಿಕಾರಿಗಳು ಹಾಗೂ ಮಾನ್ಯ ಲೋಕಾಯುಕ್ತರವರು ಯಾವುದೇ ನಿರ್ದಿಷ್ಟ ಕ್ರಮ ಕೈಗೊಳ್ಳದಿರುವುದನ್ನೇ ಸಮರ್ಪಕವಾಗಿ ಬಳಸಿಕೊಂಡು ಸ್ಟಿಂಗ್ ಆಪರೇಷನ್ ಚಟುವಟಿಯನ್ನೇ ದಿನನಿತ್ಯದ ಕಾಯಕ ಮಾಡಿಕೊಂಡಿರುವ ಖಾಸಗಿ ಮಾದ್ಯಮದ ಮುಖ್ಯಸ್ಥ ರಾಕೇಶ್ ಶೆಟ್ಟಿ ಯವರು ಹಾಗೂ ಅವರ ಚಾನಲ್ ನಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು 2026ರಲ್ಲಿ ವಿರೋಧ ಪಕ್ಷದ ಈ ಕೆಳಕಂಡ ಶಾಸಕರಾದ

ಕ್ರ.ಸಂ	ವಿರೋಧ ಪಕ್ಷದ ಶಾಸಕರ ಹೆಸರು	ವಿಧಾನಸಭಾ ಕ್ಷೇತ್ರ
1	ಶ್ರೀ ಸ್ವರೂಪ್ ಪ್ರಕಾಶ್ ರವರು ಮಾನ್ಯ ಶಾಸಕರು	ಹಾಸನ

ಶ್ರೀ ಸ್ವರೂಪ್ ಪ್ರಕಾಶ್ ರವರ ಕಾರ್ಯಾಲಯಕ್ಕೆ ಪವರ್ ಟಿವಿ ಸ್ಟಿಂಗ್ ಕಾರ್ಯಾಚರಣೆ ತಂಡ ಖುದ್ದಾಗಿ ಹೋಗಿ ರಾಜ್ಯ ಸರ್ಕಾರದ ಯೋಜನೆಗಳಾದ ಎಸ್.ಸಿ.ಪಿ/ ಟಿ.ಎಸ್.ಪಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯವರಿಗೆ ಹಣ ನೀಡಿ ನಿಮ್ಮ ತಾಲ್ಲೂಕಿಗೆ ಅನುದಾನ ಮಂಜೂರು ಮಾಡಿಸಿಕೊಂಡು ಬರುವುದಾಗಿ ಮತ್ತು ಸಂಬಂಧಪಟ್ಟ ಇಲಾಖೆಗೆ ತಾವು ಶಿಫಾರಸ್ಸು ಪತ್ರ ನೀಡುವಂತೆ ಕೋರಿ ಸದರಿ ಯೋಜನೆಗೆ ತಮಗೆ ಶೇ.5% ಹಣ ನೀಡುವುದಾಗಿ ಆಮಿಷವೊಡ್ಡಿದ್ದು ಅಲ್ಲದೆ ಒತ್ತಾಯಪೂರ್ವಕವಾಗಿ ಶಾಸಕರ ಕೈಯಲ್ಲಿ ಹಣ ನೀಡಿ ಚಿತ್ರೀಕರಿಸಿರುವುದಲ್ಲದೆ ಪವರ್ ಟಿವಿಯಲ್ಲಿ ಬಿತ್ತರಗೊಳಿಸಲಾಗಿರುವುದನ್ನು ವಿಡಿಯೋದಲ್ಲಿ ಸ್ಪಷ್ಟವಾಗಿ ನೋಡಿರುತ್ತೇವೆ.

ಸದರಿ ವಿಡಿಯೋದಲ್ಲಿ ಮಾನ್ಯ ಶಾಸಕರಾದ ಶ್ರೀ ಸ್ವರೂಪ್ ಪ್ರಕಾಶ್ ರವರು ಹಣಕ್ಕೆ ಬೇಡಿಕೆಯಿಡುವಂತಹ ಹಾಗೂ ಹಣಕ್ಕೆ ಪೀಡಿಸುವಂತಹ ಯಾವುದೇ ಹಣಕಾಸಿನ ವ್ಯವಹಾರವನ್ನು ಮಾತನಾಡದಿದ್ದರೂ ಕೂಡ ಒತ್ತಾಯಪೂರ್ವಕವಾಗಿ ಹಣ ನೀಡಿ ಅವರನ್ನು ಸ್ಟಿಂಗ್ ಆಪರೇಷನ್ –

569/6, ಮಹಾಲಕ್ಷ್ಮೀ ನಿಲಯ, ಪೇಟೆ ಬೀದಿ, ಚಿಕ್ಕನಾಯಕನಹಳ್ಳಿ – 572 214 ತುಮಕೂರು ಜಿಲ್ಲೆ.
ದೂ: 08133 267666, ಮೋ : +91 95139 55571 / 96119 35566 ಇ-ಮೇಲ್ : sureshbaabucb@gmail.com

Scanned with OKEN Scanner

ಸುರೇಶ್‌ಬಾಬು ಸಿ. ಬಿ.
ನಾಯಕರು
ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷ

ನಂ. 140–141, 1ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂ: 080–22253677 / 22033460

ಮಾಡಿ ಮಾನ್ಯ ಶಾಸಕರ ತೇಜೋವಧೆ ಹಾಗೂ ಗೌರವಕ್ಕೆ ಧಕ್ಕೆ ಉಂಟು ಮಾಡಿರುವುದು ಪವರ್ ಟಿವಿ ಯಲ್ಲಿ ಬಿತ್ತರಿಸಲಾಗಿರುವ ವಿಡಿಯೋದಲ್ಲಿ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

ಆದರೆ, ಮಾಧ್ಯಮ ಸ್ವಾತಂತ್ರ್ಯದ ವಿಧಿ 19(1)(a) ಮತ್ತು 19(2) ಸಂವಿಧಾನದ 19(1)(a) ಅಡಿಯಲ್ಲಿ ಮಾಧ್ಯಮಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿದೆಯಾದರೂ, ಅದು ಅಪರಿಮಿತವಲ್ಲ. 19(2)ನೇ ವಿಧಿಯಡಿ ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಅಪರಾಧಕ್ಕೆ ಪ್ರೇರಣೆ ನೀಡುವುದನ್ನು ತಡೆಯಲು ಮಾಧ್ಯಮಗಳ ಸ್ವಾತಂತ್ರ್ಯದ ಮೇಲೆ ನ್ಯಾಯಸಮ್ಮತ ನಿರ್ಬಂಧಗಳನ್ನು ಹೇರಲಾಗಿದೆ. ಸ್ಟಿಂಗ್ ಆಪರೇಷನ್ ಹೆಸರಿನಲ್ಲಿ ಕಾನೂನು ಕೈಗೆತ್ತಿಕೊಳ್ಳಲು ಮಾಧ್ಯಮಗಳಿಗೆ ಯಾವುದೇ ವಿಶೇಷ ಹಕ್ಕು ಸಂವಿಧಾನದಲ್ಲಿ ಇರುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ. ಮುಂದುವರೆದು, ಮಾಧ್ಯಮದವರು ತಾವೇ ಸುಳ್ಳು ಕಥೆ ಅಥವಾ ನಕಲಿ ಯೋಜನೆಗಳನ್ನು ಸೃಷ್ಟಿಸಿ, ಹಣದ ಆಮಿಷವೊಡ್ಡಿ ಬಲವಂತವಾಗಿ ವಿಡಿಯೋ ಚಿತ್ರೀಕರಣ ಮಾಡಿಕೊಂಡರೆ (**Entrapment**), ಅದು ಆ ವ್ಯಕ್ತಿಯ 21ನೇ ವಿಧಿಯ ಮೂಲಭೂತ ಹಕ್ಕನ್ನು ಸಂಪೂರ್ಣವಾಗಿ ಹತ್ತಿಕ್ಕಿದಂತೆ ಆಗುತ್ತದೆ. ಕೇವಲ ಮಾಧ್ಯಮದ ಟಿಆರ್‌ಪಿಗಾಗಿ ಒಬ್ಬ ವ್ಯಕ್ತಿಯ ಘನತೆಯನ್ನು ಸಾರ್ವಜನಿಕವಾಗಿ ಹರಾಜು ಹಾಕಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಲಾಗಿರುತ್ತದೆ.

ಇಷ್ಟೆಲ್ಲಾ ಸಂವಿಧಾನಾತ್ಮಕ ಅಂಶಗಳಿದ್ದರೂ ಕೂಡ ಸಂವಿಧಾನಾತ್ಮಕ ಅಂಶಗಳ ವಿರುದ್ಧವಾಗಿ ಕಾರ್ಯನಿರ್ವಹಿಸಿ ಮಾನ್ಯ ಶಾಸಕರುಗಳ ಹಕ್ಕಿಗೆ ಚ್ಯುತಿ ಹಾಗೂ ಗೌರವಕ್ಕೆ ಧಕ್ಕೆ ಬರುವಂತೆ ಹಣದ ಆಮಿಷವೊಡ್ಡಿ ಚಿತ್ರೀಕರಿಸಿರುವುದಲ್ಲದೆ ಇಂತಹ ಸನ್ನಿವೇಶಗಳನ್ನು ಚಿತ್ರೀಕರಿಸಿರುವುದರಿಂದಲೇ ರಾಜ್ಯದ ಹಾಲಿ ಮಾನ್ಯ ಮುಖ್ಯಮಂತ್ರಿಗಳು ನನಗೆ ಮೂರು ವರ್ಷಗಳ ಹಿಂದೆಯೇ ಸ್ಟಿಂಗ್ ಆಫ್ ದಿ ಕಿಂಗ್ (**Sting of the King**) ಬಿರುದು ನೀಡಿರುವುದಾಗಿ ತನ್ನನ್ನು ತಾನೇ ಸಮರ್ಥಿಸಿಕೊಂಡು ಈ ಪ್ರಕರಣದಲ್ಲಿ ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳನ್ನು ಪರೋಕ್ಷವಾಗಿ ಸ್ಟಿಂಗ್ ಆಪರೇಷನ್ ಕಾರ್ಯಚರಣೆಗೆ ಸಹಕಾರ ನೀಡುತ್ತಿರುವುದಾಗಿ ಬಿಂಬಿಸಿ ತಮ್ಮದೇ ಪವರ್ ಟಿವಿ ಮಾಧ್ಯಮದಲ್ಲಿ ಮುಖ್ಯಸ್ಥರಾದ ಶ್ರೀ ರಾಕೇಶ್ ಶೆಟ್ಟಿಯವರು ಸಮರ್ಥಿಸಿಕೊಂಡಿರುವುದು ರಾಜ್ಯದ ಸಾರ್ವಜನಿಕರು ತಲೆತಗ್ಗಿಸುವಂತೆ ಮಾಡಿರುವುದು ನಾಚಿಕೆಗೇಡಿನ ಸಂಗತಿಯಾಗಿರುತ್ತದೆ.

569/6, ಮಹಾಲಕ್ಷ್ಮೀ ನಿಲಯ, ಪೇಟೆ ಬೀದಿ, ಚಿಕ್ಕನಾಯಕನಹಳ್ಳಿ – 572 214 ತುಮಕೂರು ಜಿಲ್ಲೆ.
ದೂ: 08133 267666, ಮೋ : +91 95139 55571 / 96119 35566 ಇ-ಮೇಲ್ : sureshbaabucb@gmail.com

Scanned with OKEN Scanner

ಸುರೇಶ್‌ಬಾಬು ಸಿ. ಬಿ.
ನಾಯಕರು
ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷ

ನಂ. 140–141, 1ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂ: 080–22253677 / 22033460

ಆದುದರಿಂದ ಸಾರ್ವಜನಿಕ ಜೀವನದಲ್ಲಿ ದಿನನಿತ್ಯ ಜನರ ಕಷ್ಟಸುಖಗಳಿಗೆ ಸಮಾನವಾಗಿ ಸ್ಪಂದಿಸಿ ಅವರ ದುಃಖ ದುಮ್ಮಾನಗಳು, ಸಾವು ನೋವುಗಳಲ್ಲಿ ಭಾಗಿಯಾಗಿ ಅವರ ಶ್ರೇಯೋಭಿವೃದ್ಧಿ ಮತ್ತು ಜೀವನಕ್ಕೆ ಹೆಗಲಿಗೆ ಹೆಗಲುಕೊಟ್ಟು ಸಂವಿಧಾನಾತ್ಮಕವಾಗಿ ದೊರೆಯಬಹುದಾದ ಸವಲತ್ತುಗಳಾದ, ಕ್ಷೇತ್ರದ ಸರ್ಕಾರಿ ಶಾಲೆಗಳು, ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಂಡು ಉತ್ತಮ ರಸ್ತೆ, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ಬೀದಿ ದೀಪಗಳಂತಹ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಸಾರ್ವಜನಿಕರ ಮಧ್ಯದಲ್ಲಿ ದಿನನಿತ್ಯ ಕಾರ್ಯನಿರ್ವಹಿಸುತ್ತಿರುವ ಮಾನ್ಯ ಶಾಸಕರುಗಳನ್ನು ಸ್ಟಿಂಗ್ ಆಪರೇಷನ್ ಹೆಸರಿನಲ್ಲಿ ಸರ್ಕಾರದ ಅಸ್ತಿತ್ವದಲ್ಲೇ ಇಲ್ಲದ ಸುಳ್ಳು ಯೋಜನೆಯನ್ನು ಸೃಷ್ಟಿಸಿ ಆಡಳಿತ ಪಕ್ಷದ ಸಚಿವರು, ಶಾಸಕರು ಹಾಗೂ ವಿರೋಧ ಪಕ್ಷದ ಶಾಸಕರಿಗೆ ಹಣದ ಆಮಿಷವೊಡ್ಡಿ ಹೊಸ ಅಪರಾಧ ಮಾಡಲು ಪ್ರಚೋದಿಸಿ ಜನಪ್ರತಿನಿಧಿಗಳಿಗೆ ತೇಜೋವಧೆ, ಗೌರವಕ್ಕೆ ಧಕ್ಕೆ ತರುವಂತೆ ಬ್ಲಾಕ್ ಮೇಲ್ ಮಾಡುತ್ತಿರುವ ಖಾಸಗಿ ಮಾಧ್ಯಮದ ಪವರ್ ಟಿವಿ ಮುಖ್ಯಸ್ಥರಾದ ಶ್ರೀ ರಾಕೇಶ್ ಶೆಟ್ಟಿ ಮತ್ತು ಪವರ್ ಟಿವಿಯ ಸ್ಟಿಂಗ್ ಆಪರೇಷನ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿರುವ ನೌಕರರುಗಳ ಮೇಲೆ ತತಕ್ಷಣವೇ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರುತ್ತೇವೆ.

ಗೌರವ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಸುರೇಶ್ ಬಾಬು ಸಿ.ಬಿ)

ಆದ್ಯ ಗಮನಕ್ಕೆ: ಸದರಿ ಪತ್ರದ ಮೇಲೆ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ನಮ್ಮ ಕಛೇರಿಗೆ ಮಾಹಿತಿ ಒದಗಿಸಬೇಕು.

569/6, ಮಹಾಲಕ್ಷ್ಮೀ ನಿಲಯ, ಪೇಟೆ ಬೀದಿ, ಚಿಕ್ಕನಾಯಕನಹಳ್ಳಿ – 572 214 ತುಮಕೂರು ಜಿಲ್ಲೆ.
ದೂ: 08133 267666, ಮೋ : +91 95139 55571 / 96119 35566 ಇ–ಮೇಲ್ : sureshbaabucb@gmail.com

Scanned with OKEN Scanner

ಸುರೇಶ್‌ಬಾಬು ಸಿ. ಬಿ.
ನಾಯಕರು
ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷ

ನಂ. 140–141, 1ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂ: 080–22253677 / 22033460

ಶ್ರೀ ಸಿ.ಎನ್.ಬಾಲಕೃಷ್ಣ
ಶಾಸಕರು,
ಶ್ರವಣಬೆಳಗೊಳ ವಿಧಾನಸಭಾ
ಕ್ಷೇತ್ರ

ಶ್ರೀ ನೇಮಿರಾಜ್ ನಾಯ್ಕ
ಶಾಸಕರು,
ಹಗರಿಬೊಮ್ಮನಹಳ್ಳಿ
ವಿಧಾನಸಭಾ ಕ್ಷೇತ್ರ.

ಶ್ರೀ ಶರಣಗೌಡ ಕಂದಕೂರ,
ಶಾಸಕರು,
ಗುರುಮಿಠಲ್ ವಿಧಾನಸಭಾ ಕ್ಷೇತ್ರ.

ಶ್ರೀ ಜಿ.ಕೆ ವೆಂಕಟಶಿವಾರೆಡ್ಡಿ,
ಶಾಸಕರು,
ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರ

ಶ್ರೀ ಜಿ.ಡಿ ಹರೀಶ್ ಗೌಡ,
ಶಾಸಕರು,
ಹುಣಸೂರು ವಿಧಾನಸಭಾ ಕ್ಷೇತ್ರ.

ಶ್ರೀ ಎಂ.ಟಿ ಕೃಷ್ಣಪ್ಪ,
ಶಾಸಕರು,
ತುರುವೇಕೆರೆ ವಿಧಾನಸಭಾ ಕ್ಷೇತ್ರ.

ಶ್ರೀ ಸ್ವರೂಪ್ ಪ್ರಕಾಶ್,
ಶಾಸಕರು,
ಹಾಸನ ವಿಧಾನಸಭಾ ಕ್ಷೇತ್ರ.

ಶ್ರೀ ಬೀಮನಗೌಡ ಪಾಟೀಲ್,
ಶಾಸಕರು,
ದೇವರಹಿಪ್ಪರಗಿ ವಿಧಾನಸಭಾ ಕ್ಷೇತ್ರ.

ಶ್ರೀ ಎ.ಮಂಜು,
ಶಾಸಕರು,
ಅರಕಲಗೂಡು ವಿಧಾನಸಭಾ ಕ್ಷೇತ್ರ.

569/6, ಮಹಾಲಕ್ಷ್ಮೀ ನಿಲಯ, ಪೇಟೆ ಬೀದಿ, ಚಿಕ್ಕನಾಯಕನಹಳ್ಳಿ – 572 214 ತುಮಕೂರು ಜಿಲ್ಲೆ.
ದೂ: 08133 267666, ಮೋ : +91 95139 55571 / 96119 35566 ಇ–ಮೇಲ್ : sureshbaabucb@gmail.com

Scanned with OKEN Scanner



Power TV Sting Operation : ಡೀಲ್ ಮಾಡಿ ಹಣ ಪಡೆದು ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದ 50 ಶಾಸಕರು | Power TV News

Power TV News

205	25k	2023
Likes	Views	24 Mar

Download ffreedom app and apply coupon "POWERTV" to avail Rs 3000 scholarship instantly- https://ffreedom.com/p...

Power TV Sting Operation : ಡೀಲ್ ಮಾಡಿ ಹಣ ಪಡೆದು ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದ 50 ಶಾಸಕರು | Power TV News

Scanned with OKEN Scanner